**<u>ದಿನಾಂಕಃ 25-05-2023 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲುಃ ಶ್ರೀ ಎನ್ ಬಿ ಬಿ ವಕೀಲರಿಂದಃ</u>**

ದಾವಾ ಆಸ್ತಿಗಳಾದ ಸ.ನಂ.1/4,36,40/1, 44/3 ಹಾಗೂ 48/2 ಬಸವನಗೌಡ ಇವರಿಗೆ ರಿಗ್ರೆಂಟ್ ಆಸ್ತಿಗಳು ಎಂದರೆ ನಿಜ. ಈ ಬಗ್ಗೆ ಹಿರೇನಂದಿಹಳ್ಳಿ ಡ.ಸಂಖ್ಯೆ 482 ಮಂಜೂರು ಆಗಿರುತ್ತದೆ ಎಂದರೆ ಸರಿ ಅಲ್ಲ. ಉಳಿದ ಆಸ್ತಿಗಳು ಬಸವನಗೌಡ ಅವರಿಗೆ 1973 ರ ನಂತರ ಭೂ ನ್ಯಾಯ ಮಂಡಳಿಯಿಂದ ಮಂಜೂರು ಆಗಿರುತ್ತದೆ ಎಂದರೆ ಸರಿ ಅಲ್ಲ. ಈ ಬಗ್ಗೆ ಹಿರೇನಂದಿಹಳ್ಳಿ ಡ.ಸಂಖ್ಯೆ 503 ಮಂಜೂರು ಆಗಿ ಚಾಲ್ತಿಯಲ್ಲಿ ಇರುತ್ತದೆ ಎಂದರೆ ಸರಿ ಅಲ್ಲ. ನಾನು ಡ ಸಂಖ್ಯೆ 482 ಮತ್ತು 503 ಎಲ್ಲೂ ಪ್ರಶ್ನಿಸಿರುವುದಿಲ್ಲ. ನಮ್ಮ ತಂದೆ ಈ ಆಸ್ತಿಗಳು ಬಸವನಗೌಡ ಆಸ್ತಿಗಳು ಎಂದು ಒಪ್ಪಿಕೊಂಡು ಡ 482 ಮತ್ತು 503 ಪ್ರಶ್ನೆ ಮಾಡಿರುವುದಿಲ್ಲ ಎಂದರೆ ಸರಿ ಅಲ್ಲ. 1985 ರ ನಂತರ ನಮ್ಮ ತಂದೆ ಒಬ್ಬರೇ ವಾಸವಾಗಿದ್ದರು ಎಂದರೆ ನಿಜ. ಅವರ ಹೆಂಡತಿ ಮೃತ ಪಟ್ಟಿದ್ದರು ಎಂದರೆ ನಿಜ. ಆಗ ನನ್ನ ಮದುವೆಯಾಗಿತ್ತು ಎಂದರೆ ನಿಜ. ನನ್ನ ಮದುವೆ ಎಷ್ಟನೆ ಇಸವಿಯಲ್ಲಿ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಈ ದಾವೆ ಸಲ್ಲಿಸುವಾಗ ನನ್ನ ತಂದೆ ಜೀವಂತ ಆಗಿದ್ದರು ಎಂದರೆ ನಿಜ. ನನ್ನ ತಂದೆಯ ಸಿದ್ದನಗೌಡ ಮತ್ತು ಅವರ ಮಗ ಮಲಕನಗೌಡ ಮಾಡುತ್ತಿದ್ದರು ಎಂದರೆ ನಿಜ, ಅವರೊಂದಿಗೆ ನಾವು ಮಾಡುತ್ತಿದ್ದೇವು ಎಂದರೆ ನಿಜ. ನನ್ನ ತಂದೆ ಮೃತ ಪಡುವಾಗ ಆರೋಗ್ಯವಾಗಿದ್ದರು ಎಂದರೆ ಸರಿ ಅಲ್ಲ. ಪಾರ್ಶ್ವವಾಯು ಆಗಿತ್ತು. ಈ ಬಗ್ಗೆ ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿ ಅಲ್ಲ. ನನ್ನ ತಂದೆ ಆರೋಗ್ಯ ಸರಿ ಇಲ್ಲ ಅನ್ನುವುದರ ಬಗ್ಗೆ ಯಾವುದೇ ದಾಖಲೆ ಹಾಜರು ಪಡೆಸಿರುವುದಿಲ್ಲ. ನನ್ನ ತಂದೆ ಸಾಯುವ ವರೆಗೂ ಸಿದ್ದನಗೌಡ ಮತ್ತು ಮಲಕನಗೌಡರ ಅಭಿರಕ್ಷೆಯಲ್ಲಿ ಇದ್ದರೂ ಎಂದರೆ ನಿಜ, ನಾವು ಮಾಡುತ್ತಿದ್ದೆವು ಎಂದರೆ ನಿಜ. ನನ್ನ ತಂದೆಯನ್ನು ನೋಡಿಕೊಂಡಿದ್ದರಿಂದ ನನ್ನ ತಂದೆ 5 ನೇ ಪ್ರತಿವಾದಿಗೆ 2020 ನೇ ಇಸ್ವಿಯಲ್ಲಿ ಸರ್ವೆ ನಂ. 10/1 ಬ ದ 4 ಎಕರೆ

ಆಸ್ತಿಯನ್ನು ದಾನ ಪತ್ರ ಮುಖಾಂತರ ಕೊಟ್ಟಿರುತ್ತಾರೆ ಎಂದರೆ ಸರಿ ಅಲ್ಲ. ಆ ದಾನ ಪತ್ರದ ಅನ್ವಯ ಮಲಕನಗೌಡ ಆಸ್ತಿ ಸ್ವಾಧೀನ ಹೊಂದಿರುತ್ತಾರೆ ಎಂದರೆ ಸರಿ ಅಲ್ಲ. ಬಸವನಗೌಡ ಕುಟುಂಬದ ಮ್ಯಾನೇಜರ ಆಗಿ ಆಸ್ತಿಗಳನ್ನು ವಹಿವಾಟು ಮಾಡುತ್ತಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿ ಅಲ್ಲ. ಬಸವನಗೌಡನೊಂದಿಗೆ ಆಸ್ತಿಗಳನ್ನು ಶಿವನಗೌಡ ಸಹ ವಹಿವಾಟು ಮಾಡುತ್ತಿದ್ದರು ಎಂದು ಸಾಕ್ಷಿ ಹೇಳುತ್ತಾರೆ. ನನ್ನ ತಾಯಿ ಮೃತ ಪಟ್ಟಾಗ ಶಿವನಗೌಡ ಮತ್ತು ಸೋದರರು ಬೇರೆಯಾಗಿದ್ದರು ಎಂದರೆ ಸರಿ ಅಲ್ಲ. ಈ ಪ್ರತಿವಾದಿಗಳಿಗೆ ತೊಂದರೆ ಕೊಡಬೇಕೆಂಬ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿ ಅಲ್ಲ. ಬಸವನಗೌಡ ಮೃತಪಟ್ಟ ನಂತರ ಹೇಮನಗೌಡ ಆಸ್ತಿಯನ್ನು ಹಿರೆತನ ಮಾಡುತ್ತಿದ್ದರು ಸುಳ್ಳು ಹೇಳುತ್ತಿದ್ದೇನೆಂದರೆ ಸರಿ ಅಲ್ಲ. ಇಂದಿಗೂ ವಾದಿ ಪ್ರತಿವಾದಿಗಳು ದಾವಾ ಆಸ್ತಿಗಳನ್ನು ಸಾಮೂಹಿಕ ಕಬ್ಜಾ ಇರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿ ಅಲ್ಲ. ಸಾಮೂಹಿಕ ಕಬ್ಜಾ ಇರುವ ಬಗ್ಗೆ ಯಾವುದೇ ದಾಖಲೆ ಹಾಜರು ಪಡೆಸಿರುವುದಿಲ್ಲ. ನನ್ನ ತಂದೆಗೆ ಅವರು ಖರೀದಿಸಿದ ಆಸ್ತಿ ಬಿಟ್ಟರೆ ಬೇರೆ ಆಸ್ತಿ ಇರಲಿಲ್ಲ ಎಂದರೆ ಸರಿ ಅಲ್ಲ. ನನ್ನ ತಂದೆ 5 ನೇ ಪ್ರತಿವಾದಿಗೆ ದಾನ ಮಾಡಿರುವುದನ್ನು ಎಲ್ಲಿ ಪ್ರಶ್ನಿಸಿರುವುದಿಲ್ಲ. ಪ್ರತಿವಾದಿಗೆ ತೊಂದರೆ ಕೊಡಬೇಕೆಂದು ಸುಳ್ಳು ದಾವೆ ಸಲ್ಲಿಸಿ, ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿ ಅಲ್ಲ.

(**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು**).

ಓ.ಹೇ.ಕೆ.ಸರಿ ಇದೆ.

ಸಹಿ/-

ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ.ಎಂ.ಎಫ್.ಸಿ., ಬ್ಯಾಡಗಿ.